Government of Karnataka

# Karnataka Examinations Authority

Sampige Road, 18th Cross, Malleshwaram, Bangalore-560012
KEA Helpline Nos. 080-23460460 (Five Lines)
Website: http://kea.kar.nic.in E-mail: keauthority-ka@nic.in

No. ED/KEA/ADMN/CR-33/2015-16 Date: 16-05-2016

## COMMON ENTRANCE TEST – 2016 FOR DIPLOMA HOLDERS (DCET-2016)

**for admission to 2nd Year / 3rd Semester Engineering Courses and for first year to Architecture courses under Lateral Entry Scheme for both day and evening colleges in the state of Karnataka**

Government by its Notification No. ED 59 TEC 2012 dated 26-05-2012 and 21-06-2012 has directed Karnataka Examinations Authority to conduct Common Entrance Test for admission to 2nd Year / 3rd Semester Engineering Courses and for first year Architecture courses under Lateral Entry Scheme for both Day and Evening Colleges from the year 2012-13 in the state of Karnataka.

Pursuant to the said notification, online applications are invited from eligible Diploma Holders for admission to 2nd Year / 3rd Semester Engineering Courses and for first year Architecture courses under Lateral Entry Scheme for both Day and Evening Colleges. Candidates have to appear for the Common Entrance Test -2016 conducted by the Karnataka Examinations Authority to become eligible for admission to these courses. The candidates seeking admission only to B.Arch course need not have to appear for Diploma Common Entrance Test-2016 conducted by the Karnataka Examinations Authority. But, they need to have valid NATA score and apply online to become eligible for admission to First year/First Semester B.Arch course. Last date to appear for NATA is **30-06-2016.**

**Academic Eligibility:** The details of academic eligibility for all the above courses are available on the KEA website **http://kea.kar.nic.in** The candidates are advised to verify the eligibility criteria before applying for any of the courses.

The CET-2016 examination for admission to 2nd year / 3rd semester engineering courses for Diploma Holders will be based on the revised CET syllabus as approved by Government in its letter ED 146 TPE 2012 dated 30-06-2012 for admission to both day and evening engineering colleges.

| | |
|---|---|
| Commencement of Entry of Application Online | **From 4.00 pm on 17-05-2016** |
| Last Date to Enter Application details online | **Up to 5.00 pm on 04-06-2016** |
| Last date to pay the fees in the bank | **06-06-2016 (Banking Hours)** |
| Downloading of Admission Tickets on or after | **20-06-2016** |

**NOTE:**

- After ascertaining the payment details from the bank, candidate will be permitted to download the admission ticket.
- The information / particulars entered by the candidates online for Diploma CET-2016 will be deemed as "Final" and will be the basis for further process. No change in any information entered by the candidates will be entertained.
- The information entered online by the candidates with regard to Caste / Category and Annual Income remains same for the purpose of assignment of ranks / selection or allotment of a seat and no change will be entertained in future for any reasons.

**Diploma Common Entrance Test-2016 Time Table**

| Date / Day | Timings | Subject | Marks |
|---|---|---|---|
| 03-07-2016 SUNDAY | 10.00 AM to 1.00 PM | Respective subject | 180 |
| | 3.00 PM to 4.00 PM | Kannada Language Test ONLY IN BANGALORE - For Horanadu and Gadinadu Kannadiga candidates | 50 |

**NOTE:** Visit KEA Website **http://kea.kar.nic.in** for more details.

Sd/-
Executive Director

24x12

ಕರ್ನಾಟಕ ಸರ್ಕಾರ

# ಕರ್ನಾಟಕ ಪರೀಕ್ಷಾ ಪ್ರಾಧಿಕಾರ

ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 012.
ಸಹಾಯವಾಣಿ ಸಂಖ್ಯೆ: 080–23460460 (5 ಲೈನ್‌ಗಳು)
ವೆಬ್‌ಸೈಟ್: http://kea.kar.nic.in ಇಮೇಲ್: keauthority-ka@nic.in

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್.33/2015–16 ದಿನಾಂಕ: 16–05–2016

## ಡಿಪ್ಲೊಮಾ ಧಾರಕರಿಗೆ 2016–17 ನೇ ಸಾಲಿನ ವೃತ್ತಿಪರ ಕೋರ್ಸುಗಳ ಪ್ರವೇಶಕ್ಕೆ ಸಾಮಾನ್ಯ ಪ್ರವೇಶ ಪರೀಕ್ಷೆ

ಸರ್ಕಾರವು ತನ್ನ ಆದೇಶ ಸಂಖ್ಯೆ ED 59 TEC 2012 ದಿನಾಂಕ: 26–05–2012 ಮತ್ತು 21–06–2012ರಲ್ಲಿ, 2012–13ನೇ ಸಾಲಿನಿಂದ ಡಿಪ್ಲೊಮಾಧಾರಕರಿಗೆ ಲ್ಯಾಟರಲ್ ಪ್ರವೇಶ ಯೋಜನೆಯಡಿಯಲ್ಲಿ, ಹಗಲು ಮತ್ತು ಸಂಜೆ ಇಂಜಿನಿಯರಿಂಗ್ ಕಾಲೇಜುಗಳಿಗೆ 2ನೇ ವರ್ಷದ ಅಥವಾ 3ನೇ ಸೆಮಿಸ್ಟರ್‌ನ ಇಂಜಿನಿಯರಿಂಗ್ ಮತ್ತು ಮೊದಲನೇ ವರ್ಷದ ವಾಸ್ತುಶಿಲ್ಪ (Architecture) ಕೋರ್ಸ್‌ಗಳ ಪ್ರವೇಶಕ್ಕೆ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ನಡೆಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಆದೇಶ ನೀಡಿದೆ.

ಈ ಆದೇಶದನ್ವಯ, ಅರ್ಹ ಡಿಪ್ಲೊಮಾಧಾರಕರಿಂದ, 2016ನೇ ಸಾಲಿಗೆ 2ನೇ ವರ್ಷದ ಅಥವಾ 3ನೇ ಸೆಮಿಸ್ಟರ್‌ನ ಇಂಜಿನಿಯರಿಂಗ್ ಕೋರ್ಸ್‌ಗಳಿಗೆ ಲ್ಯಾಟರಲ್ ಪ್ರವೇಶ ಯೋಜನೆಯಡಿಯಲ್ಲಿ ಹಗಲು ಮತ್ತು ಸಂಜೆ ಇಂಜಿನಿಯರಿಂಗ್ ಕಾಲೇಜುಗಳ ಮತ್ತು ಮೊದಲನೇ ವರ್ಷದ ವಾಸ್ತುಶಿಲ್ಪ (Architecture) ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು, ಈ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಹತೆ ಪಡೆಯಲು, ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸುವ 2016ರ ಸಾಮಾನ್ಯ ಪ್ರವೇಶ ಪರೀಕ್ಷೆಗೆ ಹಾಜರಾಗಬೇಕು. ಮೊದಲನೇ ವರ್ಷದ ವಾಸ್ತುಶಿಲ್ಪ (Architecture) ಪ್ರವೇಶಕ್ಕೆ Council of Architecture ನವರು ನಡೆಸುವ NATA ಪರೀಕ್ಷೆಗೆ ಹಾಜರಾಗಬೇಕು ಮತ್ತು ಕಡ್ಡಾಯವಾಗಿ ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಿರಬೇಕು. NATA ಪರೀಕ್ಷೆಗೆ ಹಾಜರಾಗಲು ಕೊನೆಯ ದಿನಾಂಕ: **30–06–2016.**

**ಶೈಕ್ಷಣಿಕ ವಿದ್ಯಾರ್ಹತೆ:** ಮೇಲಿನ ಎಲ್ಲಾ ಕೋರ್ಸ್‌ಗಳ ಪ್ರವೇಶಕ್ಕೆ ವಿವರವಾದ ಅರ್ಹತೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್ ಸೈಟ್ **http://kea.kar.nic.in** ನಲ್ಲಿ ಪ್ರಕಟಿಸಲಾಗಿದೆ. ಅಭ್ಯರ್ಥಿಗಳು, ಯಾವುದೇ ಕೋರ್ಸಿಗೆ ಅರ್ಜಿ ಸಲ್ಲಿಸುವ ಮೊದಲು ಅರ್ಹತಾ ವಿವರವನ್ನು ಪರಿಶೀಲಿಸಲು ಕೋರಲಾಗಿದೆ. 2ನೇ ವರ್ಷದ ಅಥವಾ 3ನೇ ಸೆಮಿಸ್ಟರ್‌ನ ಹಗಲು ಮತ್ತು ಸಂಜೆ ಇಂಜಿನಿಯರಿಂಗ್ ಕಾಲೇಜುಗಳ ಪ್ರವೇಶಕ್ಕೆ 2016ನೇ ಸಾಲಿನ ಸಾಮಾನ್ಯ ಪ್ರವೇಶ ಪರೀಕ್ಷೆಯು ಸರ್ಕಾರದ ಪತ್ರ ನಂ. ED 146 TPE 2012 ದಿನಾಂಕ 30–06–2012 ರಲ್ಲಿ ಸೂಚಿಸಿರುವ ಪಠ್ಯ ವಿಷಯದಂತೆ ಇರುತ್ತದೆ.

| | |
|---|---|
| ಆನ್‌ಲೈನ್ ಅರ್ಜಿ ಭರ್ತಿ ಮಾಡಲು ಪ್ರಾರಂಭಿಕ ದಿನಾಂಕ | **17–05–2016ರ ಸಂಜೆ 4.00 ರಿಂದ** |
| ಆನ್‌ಲೈನ್ ಅರ್ಜಿ ಭರ್ತಿ ಮಾಡಲು ಕೊನೆಯ ದಿನಾಂಕ | **04–06–2016ರ ಸಂಜೆ 5.00 ರ ವರೆಗೆ** |
| ಬ್ಯಾಂಕುಗಳಲ್ಲಿ ಶುಲ್ಕ ಪಾವತಿಯ ಕೊನೆಯ ದಿನಾಂಕ | **06–06–2016 (ಬ್ಯಾಂಕ್ ವೇಳೆಯಲ್ಲಿ)** |
| ಪ್ರವೇಶ ಪತ್ರಗಳನ್ನು ಡೌನ್‌ಮಾಡಿಕೊಳ್ಳಲು | **20–06–2016 ರ ನಂತರ** |

**ಸೂಚನೆ:**

- ಬ್ಯಾಂಕಿನಿಂದ ಶುಲ್ಕ ಪಾವತಿಸಿದ ಬಗ್ಗೆ ಖಚಿತ ಮಾಹಿತಿ ಬಂದ ನಂತರವೇ ಅಭ್ಯರ್ಥಿಗಳಿಗೆ ಪ್ರವೇಶ ಪತ್ರವನ್ನು ಡೌನ್ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗುವುದು.
- ಅಭ್ಯರ್ಥಿಗಳು ಆನ್ ಲೈನ್ ಮೂಲಕ ಡಿಪ್ಲೊಮ ಸಿಇಟಿ–2016ಕ್ಕೆ ದಾಖಲಿಸಿ ಎಲ್ಲಾ ಮಾಹಿತಿಗಳನ್ನು ಅಂತಿಮ ಎಂದು ಪರಿಗಣಿಸಲಾಗುತ್ತದೆ ಮತ್ತು ಈ ಮಾಹಿತಿಯೇ ಮುಂದಿನ ಎಲ್ಲಾ ಪ್ರಕ್ರಿಯೆಗಳಿಗೆ ಆಧಾರವಾಗಿರುತ್ತದೆ ಹಾಗೂ ಯಾವುದೇ ಕಾರಣಕ್ಕೂ ದಾಖಲಿಸಿದ ಮಾಹಿತಿಯನ್ನು ಬದಲಾಯಿಸಲು ಅವಕಾಶವಿರುವುದಿಲ್ಲ.
- ಡಿಪ್ಲೊಮಾ ಸಿಇಟಿ–2016 ರ ಅರ್ಜಿ ನಮೂನೆಯಲ್ಲಿ ಜಾತಿ / ವರ್ಗ ಮತ್ತು ವಾರ್ಷಿಕ ಆದಾಯದ ಬಗ್ಗೆ ಒದಗಿಸಿರುವ ಮಾಹಿತಿಯು ವಿದ್ಯಾರ್ಥಿಗಳಿಗೆ ರ್‍ಯಾಂಕ್ ನೀಡುವುದಕ್ಕೆ / ಸೀಟು ಆಯ್ಕೆ ಮಾಡುವುದಕ್ಕೆ ಪರಿಗಣಿಸಲಾಗುವುದು ಮತ್ತು ಯಾವುದೇ ಕಾರಣಕ್ಕೂ ಬದಲಾಯಿಸಲು ಅವಕಾಶವಿರುವುದಿಲ್ಲ.

**2016 ರ ಡಿಪ್ಲೊಮಾ ಸಾಮಾನ್ಯ ಪ್ರವೇಶ ಪರೀಕ್ಷೆಯ ವೇಳಾಪಟ್ಟಿ**

| ದಿನಾಂಕ /ದಿನ | ಸಮಯ/ವಿಷಯ | ಅಂಕಗಳು |
|---|---|---|
| **03–07–2016 ಭಾನುವಾರ** | ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 1.00 ಗಂಟೆಯವರೆಗೆ ಆಯಾ ವಿಷಯಗಳು | 180 |
| | ಮಧ್ಯಾಹ್ನ 3.00 ರಿಂದ 4.00 ಗಂಟೆಯ ವರೆಗೆ ಕನ್ನಡ ಭಾಷಾ ಪರೀಕ್ಷೆ (ಬೆಂಗಳೂರಿನಲ್ಲಿ ಮಾತ್ರ) ಹೊರನಾಡು ಮತ್ತು ಗಡಿನಾಡು ಕನ್ನಡಿಗರಿಗೆ | 50 |

**ವಿ.ಸೂ.** ಹೆಚ್ಚಿನ ಮಾಹಿತಿಗಾಗಿ ಪ್ರಾಧಿಕಾರದ ವೆಬ್‌ಸೈಟ್ **http://kea.kar.nic.in** ಗೆ ಭೇಟಿ ನೀಡಲು ಕೋರಿದೆ.

ಸಹಿ/–
ಕಾರ್ಯನಿರ್ವಾಹಕ ನಿರ್ದೇಶಕರು

24x12